11.	ಚಿಕ್ಕಮಗಳೂರು	14.90
12.	ಕೊಡಗು	5.82
13.	ಬೆಳಗಾಂ	29.00
14.	ಧಾರವಾಡ	25.00
15.	ಬಿಜಾಪುರ	25.00
16.	ಕಾರವಾರ	12.00
17.	ಗುಲ್ಬರ್ಗಾ	25.00
18.	ಬಳ್ಳಾರಿ	18.00
19.	ಬೀದರ್	11.76
20.	ರಾಯಚೂರು	22.00
	ಒಟ್ಟು	386.00

ಆ) ಪ್ರತಿಯೊಂದು ಆಸ್ಪತ್ರೆಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡುತ್ತಿರುವ ಅಂದಾಜು ಮೊತ್ತದ ವಿವರ ಕೆಳಕಂಡಂತಿದೆ:

1.	ಪಶು ಆಸ್ಪತ್ರೆ	25,000
2.	ಪಶು ಚಿಕಿತ್ಸಾಲಯ	20,000
3.	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	15,000
4.	ಸಂಚಾರಿ ಪಶುಚಿಕಿತ್ಸಾಲಯ	15,000
5.	ಕೃತಕ ಗರ್ಭಧಾರಣಾ ಕೇಂದ್ರ	8,000

ಐ.ಜಿ.ಆರ್.ವೈ ಮತ್ತು ಇಎಎಸ್ ಸ್ಕೀಂಗಳಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಹಣ ಬಿಡುಗಡೆ

2294 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದ ಪ್ರತಿಯೊಂದು ತಾಲ್ಲೂಕಿಗೂ ಜಿ.ಆರ್.ವೈ. ಹಾಗೂ ಐ.ಜಿ.ಆರ್.ವೈ. ಮತ್ತು ಇ.ಎ.ಎಸ್. ಸ್ಕೀಮುಗಳ ಅಡಿಯಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ, (ಅದರ ಸಂಪೂರ್ಣವಾದ ವಿವರಗಳನ್ನು ತಾಲ್ಲೂಕುವಾರು ಕೊಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಅ) ಜವಾಹರ್ ರೋಜ್‌ಗಾರ್ ಯೋಜನೆಯ ಮೊದಲನೇ ವಾಹಿನಿಯಡಿಯಲ್ಲಿ ರಾಜ್ಯದ ಎಲ್ಲಾ 20 ಜಿಲ್ಲೆಗಳಿಗೆ ರೂ. 8879.22 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಐ.ಜಿ.ಆರ್.ವೈ. ಯಡಿ ರಾಜ್ಯದ 7 ಜಿಲ್ಲೆಗಳಿಗೆ 1021.25 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಎರಡು ಯೋಜನೆಗಳಲ್ಲಿ ಜಿಲ್ಲಾವಾರು ಮಾತ್ರ ಬಿಡುಗಡೆ ಮಾಡಲಾಗುತ್ತೆ. ತಾಲ್ಲೂಕುವಾರು ಹಣ ಬಿಡುಗಡೆ ಮಾಡುವುದಿಲ್ಲ. ಜಿಲ್ಲಾವಾರು ಮಾಹಿತಿಯನ್ನು ತಃಖ್ತೆಯಲ್ಲಿ ಲಗತ್ತಿಸಿದೆ.

ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ರೂ. 5050.00 ಲಕ್ಷಗಳನ್ನು ತಾಲ್ಲೂಕುವಾರು ಬಿಡುಗಡೆ ಮಾಡಲಾಗಿದೆ. ವಿವರದ ತಃಖ್ತೆ ಲಗತ್ತಿಸಿದೆ.